ಆಕೆ ತೇಪೆ ಹಾಕುವ ಸ್ವರದಲ್ಲಿ, ''ನಾಡಿದ್ದು ಸೋಮವಾರ ಕೂಡ ಅದು ನಿಮ್ಮೊಂದಿಗೆ ಪಯಣಿಸಿದರೆ ಹೇಳಿ. ಈ ವಾರದಲ್ಲಿ ಒಂದು ದಿನ ರಜೆ ಹಾಕಿಯಾದರೂ ಬೆಳಗ್ಗೆ ನಿಮ್ಮೊಂದಿಗೆ ಬರುತ್ತೇನೆ. ಅದು ತನ್ನ ಹೆಂಡತಿಯನ್ನು ನಿಮಗೆ ಪರಿಚಯಿಸಿದ ಹಾಗೆ ನೀವೂ ನಿಮ್ಮ ಹೆಂಡತಿಯನ್ನೂ ಅದಕ್ಕೆ ತೋರಿಸಬೇಕು'' ಅಂದಳು ನಗುತ್ತ. ನಾವು ವಿಡಿಯೊ ಮಾಡಿ ಫೇಸ್‌ಬುಕ್ಕಲ್ಲಿ ಹಾಕುವಾ... ವೈರಲ್ ಆಗುತ್ತೆ ನೋಡಿ, ಸಣ್ಣ ವಿಷಯ ಅಲ್ಲ ಇದು'' ಅಂತಲೂ ಸೇರಿಸಿದಳು. ನಾನು ಮಾತಾಡಲಿಲ್ಲ.

ಮರುದಿನ ಭಾನುವಾರ. ರಮಾಳಿಗೆ ಗೇಲಿ ಮಾಡುವ ಆಸ್ಪದ ಕೊಡಬಾರದೆಂದು ದೃಢ ನಿಶ್ಚಯ ಮಾಡಿ ನಾನು ಗಂಟೆ ಒಂಬತ್ತಾದಾಗ ಬೇಕೆಂತಲೇ ಸ್ನಾನಕ್ಕೆ ಹೋದೆ. ಸೋಪು ಹಚ್ಚುವಾಗ ಬಾಗಿಲು ಬಡಿದ ರಮಾ, ''ರೀ ನಿಮ್ಮ ಕಾರಿನ ಬಾನೆಟ್ ಮೇಲೆ ಹಕ್ಕಿ ಬಂದು ಕೂತಿದೆ'' ಅಂದಳು. ನಾನು ಮಾತಾಡದೆ ಸ್ನಾನ ಮುಂದುವರೆಸಿದೆ. ''ಬೇಗ ಬನ್ನಿ ಅದೇ ಹಕ್ಕಿಯಾ ನೋಡಿ'' ಅಂದಳು. ಅದಕ್ಕೂ ಉತ್ತರ ಕೊಡದೆ ಸ್ನಾನ ಮುಗಿಸಿ ಬಂದೆ. ''ಸುಮ್ನೆ ತಮಾಷೆಗೆ ಹೇಳಿದ್ದು, ಸಿಟ್ಟು ಮಾಡಿಕೊಂಡ್ರಾ?'' ಎಂದು ಬೇರೆ ಸೇರಿಸಿದಳು. ನಾನು ಮತ್ತೂ ಸುಮ್ಮನಿದ್ದೆ. ಬೇಕೆಂತಲೇ ಅವಳೆದುರಿಗೇ ಅಮ್ಮನಿಗೆ ಫೋನ್ ಮಾಡಿ, ''ಹಕ್ಕಿ ಬಂದು ಕೂತರೆ ನಾಳೆ ವಿಡಿಯೊ ಮಾಡಿ ಕಳಿಸ್ತೀನಿ'' ಅಂದೆ. ರಮಾಳ ಕಾಲೆಳೆಯುವುದು ಹೇಗೆ ಎಂಬುದು ನನಗೇನು ಗೊತ್ತಿಲ್ಲದ ಸಂಗತಿಯಲ್ಲ ನೋಡಿ!



ಸೋಮವಾರ ಬೆಳಗ್ಗೆ ರಮಾ ಸ್ಕೂಲಿನ ಯಾರಿಗೋ ಫೋನಲ್ಲಿ, ''ಬರುವಾಗ ಸ್ವಲ್ಪ ಲೇಟಾಗುತ್ತೆ ಹೆಡ್ ಮಿಸ್ಟ್ರೆಸ್‌ಗೆ ಹೇಳಿ'' ಎನ್ನುತ್ತಿದ್ದುದನ್ನು ಕೇಳಿಸಿಕೊಂಡೆ. ಆಕೆ ಇವತ್ತೇ ನನ್ನ ಹಕ್ಕಿ ನೋಡಲು ಬರುವ ಪ್ಲಾನ್ ಹಾಕಿದ್ದಾಳೆ ಎನ್ನುವುದು ಖಾತರಿಯಾಯಿತು. ಸ್ನಾನ ಮಾಡಿ ಬರುವಾಗ ಅಲ್ಲೇ ಡೈನಿಂಗ್ ಟೇಬಲ್ ಬಳಿ ಕುಳಿತವಳನ್ನು ಬೇಕೆಂತಲೇ, ''ಸ್ಕೂಲಿಲ್ವಾ?'' ಎಂದು ಕೇಳಿದೆ. ''ಒಂದು ಹಕ್ಕಿ ನನ್ನ ಗಂಡನ ತಲೆ ತಿನ್ನುವುದರಲ್ಲಿ ನನಗೆ ಕಾಂಪಿಟೇಶನ್ ಕೊಡುತ್ತಿದೆ. ಕುತೂಹಲ ಜಾಸ್ತಿಯಾಗಿದೆ ನೋಡಿ, ಬರುವಾಗ ಸ್ವಲ್ಪ ಲೇಟಾಗುತ್ತೆ ಅಂತ ಹೇಳಿದ್ದೇನೆ'' ಎಂದು ಮುಸಿಮುಸಿ ನಕ್ಕಳು.

ಉಪಾಹಾರ ಮುಗಿಸಿದೆ. ತಯಾರಾಗಿ ನಿಂತಿದ್ದ ರಮಾ ಮತ್ತು ನಾನು ಕೆಳಗಿಳಿದು ಬಂದೆವು. ಕಾರಿನ ಬಳಿ ಬರುವಾಗ ಸುತ್ತಮುತ್ತ ಸಿಐಡಿ ಥರ ಹಕ್ಕಿ ಹುಡುಕುತ್ತಿದ್ದಳಾಕೆ. ಕಾರಿನ ಬಳಿ ಬಂದೆವು. ಬಾನೆಟ್ ಖಾಲಿಯಾಗಿತ್ತು. ನಾನು ಕಾರಲ್ಲಿ ಕುಳಿತು ಸ್ಟಾರ್ಟ್ ಮಾಡಿದೆ. ''ಸ್ವಲ್ಪ ಇರಿ...'' ಅನ್ನುತ್ತ ರಮಾ ಹೊರಗೇ ನಿಂತಿದ್ದಳು. ''ಬಾ ಕೂತ್ಕೋ, ನೀನು ಹಾಗೆ ನಿಂತರೆ ಅದು ಹೆದರಿ ಬರದೇ ಇರಲೂ ಬಹುದು'' ಎಂದೆ. ಒಲ್ಲದ ಮನಸ್ಸಿನಲ್ಲಿ ಕಾರಲ್ಲಿ ಕುಳಿತ ರಮಾ, ''ಸ್ವಲ್ಪ ನಿಲ್ಲಿ, ನಾವು ಸ್ವಲ್ಪ ಬೇಗನೇ ಹೊರಟಿದ್ದು. ಇನ್ನೂ ಒಂಬತ್ತಾಗಿ ಹತ್ತು ನಿಮಿಷವಷ್ಟೇ ಆಗಿರೋದು. ಈಗ ಬರಬಹುದು'' ಅಂದಳಾಕೆ. ''ಬಂದ್ರೆ ಬರುತ್ತೆ, ಇಲ್ಲಾಂದ್ರೆ ಇಲ್ಲ. ನಮ್ಮ ಕೆಲಸದವಳ ಥರಾನೆ. ಕಾದುಕೂತು ಪ್ರಯೋಜನ ಇಲ್ಲ'' ಎನ್ನುತ್ತ ಕಾರನ್ನು ರಸ್ತೆಗಿಳಿಸಿದೆ. ರಮಾಳ ಮೋರೆ ಇಷ್ಟು ಚಿಕ್ಕದಾಯಿತು. ''ಪುನಃ ಇನ್ನೊಂದು ದಿನ ಪರ್ಮಿಶನ್ ಹೇಗೆ ಕೇಳೋದು? ಕೆಲಸ ಎಲ್ಲ ಕೆಟ್ಟಿತು'' ಎಂದಳು. ಕಾರು ಸುಮಾರು ಇಪ್ಪತ್ತು ಮೀಟರ್ ಚಲಿಸಿರಬಹುದು, ಥಟ್ಟನೆ ಹಕ್ಕಿ ಹಾರಿ ಬಂದು ವೈಪರಿನಲ್ಲಿ ಕೂತಿತು! ರಮಾ ಎಕ್ಸೈಟ್ ಆಗಿ, ''ನೋಡ್ರೀ ಬಂತು'' ಎನ್ನುತ್ತಿದ್ದವಳನ್ನು, ''ಮೆಲ್ಲಮೆಲ್ಲ... ನಿನ್ನ ಲಂಕಿಣಿ ಆರ್ಭಟಕ್ಕೆ ಹೆದರಿ ಹಾರಿ ಹೋದೀತು'' ಎಂದೆ ನಾನು. ಹಕ್ಕಿಯ ಆಗಮನದಿಂದ ನಿಜಕ್ಕೂ ಸಂತೋಷಗೊಂಡಿದ್ದ ಆಕೆ ಸಮಯ ಹಾಳು ಮಾಡದೆ ಮೊಬೈಲಿನಲ್ಲಿ ವಿಡಿಯೊ ಚಿತ್ರೀಕರಣ ಆರಂಭಿಸಿದಳು.